ಪೈಕಿ ರೂ.2.00 ಲಕ್ಷಗಳನ್ನು ಪಾವತಿಸಿದ್ದು ಬಾಕಿ ರೂ. 11.63 ಲಕ್ಷಗಳನ್ನು ಅನುದಾನ ಬಂದ ನಂತರ ಪಾವತಿ ಮಾಡಲಾಗುವುದು.

ದಿನಾಂಕ 19.3.2003ರ ಚುಕ್ಕೆಗುರುತಿಲ್ಲದ ಪ್ರಶ್ನೋತ್ತರಗಳು

ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಸ್ವಜಲಧಾರ ಯೋಜನೆ

1437(1557) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಗ್ರಾಮೀಣ ನೀರು ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಸ್ವಜಲಧಾರಾ ಯೋಜನೆಗೆ ಬಿಡುಗಡೆ ಆದ ಹಣ ಎಷ್ಟು; ಇದರಲ್ಲಿ ಕೈಗೊಂಡ ಕಾಮಗಾರಿಗಳ ಸಂಖ್ಯೆ ಎಷ್ಟು;

ಆ. ರಾಜ್ಯದಲ್ಲಿ ಎಷ್ಟು ಹಳ್ಳಿಗಳು ಈ ಯೋಜನೆಯಡಿ ಅರ್ಜಿ ಸಲ್ಲಿಸಿವೆ;

ಇ. ಕೇಂದ್ರ ಸರ್ಕಾರದ ಈ ಯೋಜನೆಯನ್ನು ಸದುಪಯೋಗ ಗೊಳಿಸಲು ರಾಜ್ಯ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಕೆ.ಬಿ. ಕೋಳಿವಾಡ್ (ಗ್ರಾಮೀಣ ನೀರು ಸರಬರಾಜು ಸಚಿವರು)

ಅ. ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಸ್ವಜಲಧಾರಾ ಯೋಜನೆಗಾಗಿ ಈವರೆಗೆ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ ಮತ್ತು ಈ ಯೋಜನೆಯಡಿ ಈವರೆಗೆ ಯಾವುದೇ ಕಾಮಗಾರಿಯನ್ನು ತೆಗೆದುಕೊಂಡಿರುವುದಿಲ್ಲ.

ಆ. 155

ಇ. ರಾಜ್ಯದ ಎಲ್ಲಾ ಜಿಲ್ಲಾ: ತಾಲ್ಲೂಕು: ಗ್ರಾಮ ಪಂಚಾಯತಿಗಳಿಗೆ ಈ ಯೋಜನೆಯನ್ನು ಸದುಪಯೋಗಪಡಿಸಿಕೊಳ್ಳಲು ತಿಳಿಸಲಾಗಿದೆ.

ಕರ್ನಾಟಕ ಆರೋಗ್ಯ ಅಭಿವೃದ್ಧಿ ಯೋಜನೆ

1438(1558) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಕರ್ನಾಟಕ ಆರೋಗ್ಯ ಅಭಿವೃದ್ಧಿ ಯೋಜನೆಗೆ (KHSDP) ಇದುವರೆಗೆ ಮಂಜೂರಾದ ಹಣ ಎಷ್ಟು? ಬಳಸಿಕೊಂಡ ಹಣ ಎಷ್ಟು?

ಆ. ಸದರಿ ಯೋಜನೆಯಡಿ ಕೈಗೊಂಡ ಯೋಜನೆಗಳ ಸಂಖ್ಯೆ ಎಷ್ಟು? ಕಾಮಗಾರಿ ಪೂರ್ಣಗೊಂಡ ಯೋಜನೆಗಳ ಸಂಖ್ಯೆ ಎಷ್ಟು?

ಇ. ತೀರ್ಥಹಳ್ಳಿ ಜೆ.ಸಿ.ಆಸ್ಪತ್ರೆಗೆ ಇದುವರೆಗೆ ಸದರಿ ಯೋಜನೆಯಿಂದ ಖರ್ಚಾದ ಮೊತ್ತ ಎಷ್ಟು? ಇನ್ನೂ ಯಾವ ಕಾಮಗಾರಿಗಳು ಬಾಕಿ ಇವೆ? ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ. ಕರ್ನಾಟಕ ಆರೋಗ್ಯ ಅಭಿವೃದ್ಧಿ ಯೋಜನೆಗೆ (KHSDP) ಇದುವರೆಗೆ ಮಂಜೂರಾದ ಹಣ ರೂ. 595.00 ಕೋಟಿಗಳು, ಇದುವರೆಗೆ ಬಳಸಿಕೊಂಡ ಹಣ ರೂ. 565.64 ಕೋಟಿಗಳು.

ಆ. ಈ ಯೋಜನೆಯಡಿ ಒಟ್ಟು 204 ದ್ವತೀಯ ಹಂತದ ಆಸ್ಪತ್ರೆಗಳ ನವೀಕರಣ ಮತ್ತು ವಿಸ್ತರಣಾ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ.

ಇದುವರೆವಿಗೂ 188 ಕಾಮಗಾರಿಗಳು ಪೂರ್ಣಗೊಂಡಿದೆ.

ಇ. ತೀರ್ಥ ಹಳ್ಳಿಯ ಜೆ.ಸಿ. ಆಸ್ಪತ್ರೆಯ ನವೀಕರಣ ಮತ್ತು ವಿಸ್ತರಣೆ, ಈ ಆಸ್ಪತ್ರೆಗೆ ವೈದ್ಯಕೀಯ ಸಲಕರಣೆ, ಪೀಠೋಪಕರಣಗಳು, ವಾಹನ ಇತ್ಯಾದಿ ಒದಗಿಸಿರುವ ಬಾಬ್ತು ಯೋಜನೆಯಿಂದ ಒಟ್ಟು ಖರ್ಚಾದ ಮೊತ್ತ ರೂ. 336.30 ಲಕ್ಷಗಳು

ಆಸ್ಪತ್ರೆಯ ಎಲ್ಲಾ ಕಾಮಗಾರಿಗಳನ್ನೂ ಪೂರ್ಣಗೊಳಿಸಿ ಆಸ್ಪತ್ರೆ ಕಟ್ಟಡವನ್ನು ವೈದ್ಯಾಧಿಕಾರಿಗಳಿಗೆ ಹಸ್ತಾಂತರಿಸಲಾಗಿದೆ.

ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಕೆಲಸ ನಿರ್ವಹಿಸದ ಅವಧಿಗೆ ವೇತನ ಪಾವತಿ

1439(1862) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಸಿ.ಸಿ.ಟಿ.ವ್ಯಂದದ ನೌಕರರಿಗೆ ಪೂರ್ವಾನ್ವಯವಾಗಿ ಪ್ರಥಮ ದರ್ಜೆ ಸಹಾಯಕರಾಗಿ ಅರ್ಹತಾ ದಿನಾಂಕ ನಿಗಧಿಪಡಿಸಿ ಈ ಅವಧಿಗೆ ರೂ. 25.00 ಲಕ್ಷಕ್ಕೂ ಹೆಚ್ಚು ಹಣ ಪಾವತಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಪ್ರಥಮ ದರ್ಜೆ ಸಹಾಯಕರಾಗಿ ಕರ್ತವ್ಯವನ್ನೇ ನಿರ್ವಹಿಸದ ಅವಧಿಗೆ ವೇತನ ಪಾವತಿಸಲು ಯಾವ ನಿಯಮಗಳಲ್ಲಿ ಅವಕಾಶವಿದೆ;

ಇ. ಶಾಲಾ ಕಟ್ಟಡ, ಪೀಠೋಪಕರಣ ಸರಬರಾಜು ಯೋಜನೆಗಳಿಗೆ ಹಣದ ಕೊರತೆಯಿರುವಾಗ ನಿಯಮಕ್ಕೆ ವಿರುದ್ಧವಾಗಿ ಈ ರೀತಿ ಹಣ ಪಾವತಿಸಲು ಆದೇಶ ಹೊರಡಿಸಿದ ಅಧಿಕಾರಿ ಹಾಗೂ ಸಿಬ್ಬಂದಿ ಯಾರು (ಹೆಸರನ್ನು ನೀಡುವುದು);

ಈ. ನಿಯಮಕ್ಕೆ ವಿರುದ್ಧವಾಗಿ ಖಜಾನೆಯಿಂದ ಹಣ ನಗದೀಕರಿಸಲು ಕಾರಣ ರಾದ ಈ ಅಧಿಕಾರಿಗಳ ಮೇಲೆ ಸರ್ಕಾರ ಕ್ರಮ ತೆಗೆದುಕೊಳ್ಳುವುದೇ?

ಶ್ರೀ ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ. ಬಂದಿದೆ.

ಆ. ಸರ್ಕಾರದ ಅಧಿಸೂಚನೆ ಸಂಖ್ಯೆ :ಇಡಿ 111 ಡಿಜಿಎ 84 ದಿನಾಂಕ: 26.3.1990 ರ ಪ್ರಕಾರ ಪ್ರಥಮ ದರ್ಜೆ ಸಹಾಯಕರ ಹುದ್ದೆಯ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ತಂದು ದ್ವಿತೀಯ ದರ್ಜೆ ಸಹಾಯಕ:ದ್ವಿತೀಯ ದರ್ಜೆ ಸಹಾಯಕ ಸಹಿತ ಬೆರಳಚ್ಚುಗಾರರ ವೃಂದದಿಂದ ಪ್ರಥಮ ದರ್ಜೆ ಸಹಾಯಕರ ಹುದ್ದೆಗೆ ಕ್ರಮವಾಗಿ 45:5 ಶೇಕಡ ಅನುಪಾತದಲ್ಲಿ ಬಡ್ತಿಗೆ ಅವಕಾಶವನ್ನು ದಿನಾಂಕ 06.2.1973ರಿಂದಲೇ ಪೂರ್ವಾನ್ವಯವಾಗಿ ಜಾರಿಯಾಗುವಂತೆ ಆದೇಶಿಸಿರುವುದರಿಂದ ದ್ವಿತೀಯ ದರ್ಜೆ ಸಹಾಯಕ ಸಹಿತ ಬೆರಳಚ್ಚುಗಾರರ ವೃಂದದಿಂದ ಪ್ರಥಮ ದರ್ಜೆ ಸಹಾಯಕರ ಹುದ್ದೆಗೆ ಸ್ಥಾನಪನ್ನ ಬಡ್ತಿ ಹೊಂದಿದ ನೌಕರರಿಗೆ ಬಡ್ತಿ ಅರ್ಹತಾ ದಿನಾಂಕವನ್ನು ನಿಗಧಿಸಲಾಗಿದೆ. ಹಾಗೂ ಕರ್ನಾಟಕ ಆಡಳಿತ ನ್ಯಾಯಮಂಡಳಿಯು ಅರ್ಜಿ ಸಂಖ್ಯೆ :3011, 6387-6407 ಮತ್ತು 6574-6607:96ರ ಮೇಲೆ ದಿನಾಂಕ:10.8.2001 ರಂದು ತೀರ್ಪುನೀಡಿ ಪೂರ್ವಾನ್ವಯವಾಗಿ ಬಡ್ತಿಗೆ ಅವಕಾಶ ಕಲ್ಪಿಸಿರುವ ಸರ್ಕಾರದ ಆದೇಶ ಕ್ರಮಬದ್ಧ ಎಂದು ಆದೇಶಿಸಿರುವುದರಿಂದ ಕಾಲ್ಪನಿಕವಾಗಿ ಅರ್ಹತಾ ದಿನಾಂಕದಿಂದ ವೇತನವನ್ನು ನಿಗಧಿಸಿ ನೌಕರರು ಪ್ರಥಮ ದರ್ಜೆ ಸಹಾಯಕರ ಹುದ್ದೆಗೆ ಹಾಜರಾದ ದಿನಾಂಕದಿಂದ ಮಾತ್ರ ಆರ್ಥಿಕ ಸೌಲಭ್ಯವನ್ನು ನೀಡಲಾಗಿರುತ್ತದೆ.